**ಸಿಟ್ಟಿಗೆ ಇರುವ ಭೌತಿಕ ಆಯಾಮವಾದರೂ ಎಂಥದ್ದು. ಸಿಟ್ಟು ಬರುವ ಮುನ್ನ ಇಡೀ ದೇಹ ಝುಮ್ಮ್ನೆ ಹುರಿಗೊಳ್ಳುತ್ತದೆ. ಮನಸ್ಸಿನಲ್ಲಿ ಪದಗಳು ಮೂಡುತ್ತವೆ. ಸಿಟ್ಟಿಗೆ ಕಾರಣರಾದವರ ಗುರುತು ಸ್ಪಷ್ಟ ಇರುತ್ತದೆಯಲ್ಲ? ಅವರಿಗೆ ನಾಟುವಂತೆ ಮಾತನಾಡುವಷ್ಟು ಶಕ್ತಿ ಎಂಥಾ ಹಸಿದ ಹೊಟ್ಟೆಯಲ್ಲೂ ಕ್ರೋಢೀಕರಣ ಆಗುತ್ತದೆ.**

ಮತ್ತೆ ನನಗೆ ಹಾರ್ನ್ ಮಾಡೀ ಮಾಡೀ ಸಾಕಾಯ್ತು. ಎಷ್ಟಂತ ಕುಯ್ಯ ಕುಯ್ಯ ಅಂತ ನಾನು ಬಡ್ಕೊಳೋದು?"

"ಮಗಳೇ, ನಿನ್ನದು ಒಂಥರಾ ಹೊಸ ಎನ್ನಾರೈ ಮೆಂಟಾಲಿಟಿ. ಬೆಂಗಳೂರಿನಲ್ಲಿ ನಿಮಗೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗುವುದು ಅಂದರೆ ಇಡೀ ದಿನದ ಕೆಲಸ... ಅದಕ್ಕೆ ಸಾಕಷ್ಟು ಪ್ಲಾನಿಂಗು, ಮ್ಯಾಪಿಂಗು ಎಲ್ಲಾ ಮಾಡಿಕೊಳ್ತೀರಿ... ಗಾಡಿ ತಗೊಂಡು ಹೋಗೋದು ಒಂದು ಭಾರೀ ಅಸೈನ್ಮೆಂಟು ಅಲ್ವಾ?"

"ಹೌದು."

"ಆದರೆ ಮೈಸೂರಿನಲ್ಲಿ ಹಾಗಿಲ್ಲ. ರಸ್ತೆಗಳು ವಿಶಾಲವಾಗಿ ಇವೆ. ಟ್ರಾಫಿಕ್ ಸಿಗ್ನಲ್ಲುಗಳು ಕಡಿಮೆ... ಎಲ್ಲಿಂದ ಎಲ್ಲಿಗಾದರೂ ಸರಿಯೇ ಇಪ್ಪತ್ತರಿಂದ ಹೆಚ್ಚೆಂದರೆ ಮೂವತ್ತು ನಿಮಿಷದ ಒಳಗೆ ತಲುಪುತ್ತೀವಿ. ಡ್ರೈವಿಂಗ್ ಈಸ್ ಅ ಪ್ಲೆಷರ್ ಫಾರ್ ಅಸ್! ನಮಗ್ಯಾಕೆ ಸುಮ್ಮನೆ ಧಾವಂತ? ನಮಗೆ ಎಲ್ಲಿಗೂ ಹೋಗಲಿಕ್ಕೆ ಇಲ್ಲ. ಬರೀ ಖುಷಿಯಾಗಿ ಡ್ರೈವಿಂಗ್ ಮಾಡಲಿಕ್ಕಿದೆ... ಗೊತ್ತಾಯ್ತಾ?"

"ಹೌದು ನೋಡು. ಇದು ಹೇಳಿಕೇಳಿ ರಾಜರ ಊರು. ಅದಕ್ಕೆ ಜನಕ್ಕೆ ತಾಳ್ಮೆ ಹೆಚ್ಚು..."

"ಅಲ್ವಾ ಮತ್ತೆ!" ಅಂತ ನಕ್ಕೆವು.

ಬದಲಾಗುವ ವಾತಾವರಣಕ್ಕೂ ಸಿಟ್ಟಿಗೂ ಸಂಬಂಧ ಇದೆ ಎಂದರೆ ನೀವು ನಂಬಲೇಬೇಕು. ಹಾಗೆ ನೋಡಿದರೆ ನಮ್ಮ ರಾಜ್ಯದ ತಂಪು ಊರುಗಳಲ್ಲಿ ಇರುವ ಜನ ಅಷ್ಟು ಬೇಗ ಕೆರಳುವುದಿಲ್ಲ. ಬಿಸಿಲು ನಾಡಿನ ಹಾಗೂ ಬಯಲುಸೀಮೆಯ ಜನಗಳಿಗೆ ಸಿಟ್ಟು ಭಾರೀ ಜಾಸ್ತಿ, ಇದಕ್ಕೆ ಅಪವಾದಗಳೂ ಇರಬಹುದು.

ಬಿಸಿಲು ಹೆಚ್ಚಾದಂತೆ ಅಪರಾಧಗಳೂ ಹೆಚ್ಚಾಗುತ್ತವೆ. ಜನ ಆಗಿನ ದಿನಗಳಲ್ಲೇ ಬೀದಿಗಿಳಿಯುತ್ತಾರೆ. ದೇಶಗಳು ಬೇಸಗೆಯಲ್ಲಿ ಎಲೆಕ್ಷನ್ ನಡೆಸಲು ಹಿಂದೆಮುಂದೆ ನೋಡುತ್ತವೆ. ಏಕೆಂದರೆ ಸಿಟ್ಟಾದ ಜನರ ಕೈಗೆ ಬಿಸಿಯಾದ ವಾತಾವರಣದಲ್ಲಿ ಪ್ರಜಾಪ್ರತಿನಿಧಿಯೊಬ್ಬ ಸಿಕ್ಕರೆ ಗೂಸ ಜಡಿಯದೆ ಬಿಡುವುದಿಲ್ಲ ಎನ್ನುವುದು ಸಾಬೀತಾಗಿರುವ ಸಂಗತಿ. ಬೇಸಗೆಯಲ್ಲಿ ಎಲ್ಲದರ ಖರ್ಚು ಹೆಚ್ಚಾಗಿ ಸಿಟ್ಟು ಮೇಲೇರಿ ದಂಪತಿಗಳು ವಿಚ್ಛೇದನ ಕೋರಿ ಕೋರ್ಟ್ ಮೆಟ್ಟಿಲೇರುವುದು ಜಾಸ್ತಿ ಎಂದು ಲಂಡನ್ನಿನ ಸಮೀಕ್ಷಾ ಸಂಸ್ಥೆಯೊಂದು ವರದಿ ಮಾಡಿದ್ದನ್ನು ಇಲ್ಲಿ ಸ್ಮರಿಸಲೇ ಬೇಕಿದೆ.

ದೇವರ ಸಿಟ್ಟಿನ ಬಗ್ಗೆ ಹೇಳಿದೆನಲ್ಲ? ಬರೀ ದೇವರು ಮಾತ್ರ ಸಿಟ್ಟುಗೊಳ್ಳಲು ಅರ್ಹ ಅಂತ ಭಾವಿಸಬೇಡಿ. ಈ ಹಕ್ಕು ಜನಪದದಲ್ಲಿ ಭಕ್ತರಿಗೂ ಉಂಟು! ಇದನ್ನು ಯಾವ ಆಂಗರ್ ಮ್ಯಾನೇಜ್ಮೆಂಟ್ ತಜ್ಞರೂ ಅಪ್ಪಿತಪ್ಪಿಯೂ ಹೇಳುವುದಿಲ್ಲ!

ಬೇಸಗೆಯ ಉಚ್ಛ್ರಾಯ ಸ್ಥಿತಿ ಉಂಟಾಗುವ ಮೇ ತಿಂಗಳಿನ ಕೊನೆಯ ವಾರದಲ್ಲಿ ದಕ್ಷಿಣ ಕೊಡಗಿನ ದೇವರಪುರದಲ್ಲಿ ಸುತ್ತಲಿನ ಹಳ್ಳಿ/ಕಾಫಿ/ಟೀ ತೋಟಗಳಲ್ಲಿ ಕೆಲಸ ಮಾಡುವ ಸಾವಿರಾರು ಸಂಖ್ಯೆಯ